ಅ.ದಾ. ಸಂಃ 357/2018 ಪಿ.ಡಬ್ಲ್ಯು 01

ದಿನಾಂಕಃ 10-10-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಶ್ರೀ.ಜಿ.ಆರ್ **1** ಮತ್ತು **2** ನೇ ಪ್ರತಿವಾದಿಗಳ ಪರ ವಕೀಲರಿಂದಃ

ರಾಮಚಂದ್ರಪ್ಪರವರಿಗೆ ದಾವಾ ಆಸ್ತಿಯು ಯಾವ ರೀತಿ ಬಂತು ಎಂಬ ಪ್ರಶ್ನೆಗೆ ಸಾಕ್ಷಿ ರಾಮಚಂದ್ರಪ್ಪರವರು ಮರಿಸ್ವಾಮಿರವರಿಂದ ಕರಾರು ಪತ್ರವನ್ನು ಬರೆಸಿಕೊಂಡು ಅದರ ಮೂಲಕ ದಾವಾ ಆಸ್ತಿಯನ್ನು ನನಗೆ ಕ್ರಯ ಮಾಡಿದರು ಎಂದು ನುಡಿಯುತ್ತಾರೆ. ಮೀನಾಕ್ಷಮ್ಮ ಲೇಔಟ್ ನಲ್ಲಿ ಎಷ್ಟು ಸೈಟ್ ಗಳಿವೆ ಹಾಗೂ ಅದರ ಒಟ್ಟು ವಿಸ್ತೀರ್ಣ ಎಷ್ಟು ಇದೆ ಎಂಬುದು ನನಗೆ ಗೊತ್ತಿಲ್ಲ. ನಾನು ಮೀನಾಕ್ಷಮ್ಮ ಲೇಔಟ್ ನಲ್ಲಿ ಖರೀದಿಸಿದೆ ಎಂದು ಹೇಳುವ ಸೈಟಿನ ನಂಬರ್ ನನಗೆ ಗೊತ್ತಿಲ್ಲ. ನಿಪಿ-3 ರಲ್ಲಿ ಸ್ವತ್ತಿನ ಸಂಖ್ಯೆಯನ್ನು ನಮೂದಿಸಿರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಅದು ಮುನಿಸಿಪಾಲಿಟಿ ರವರ ದಾಖಲೆ ಎಂದು ನುಡಿಯುತ್ತಾರೆ. ರಾಮಚಂದ್ರಪ್ಪರವರಿಗೆ ಆಸ್ತಿಯು ಯಾವ ದಾಖಲೆಗಳ ಆಧಾರದ ಮೇಲೆ ಬಂತು ಎಂದು ತೋರಿಸಲು ಮುನಿಸಿಪಾಲಿಟಿ ಇಂದ ದಾಖಲೆಗಳನ್ನು ಪಡೆದುಕೊಂಡು ನ್ಯಾಯಾಲಯದ ಮುಂದೆ ಹಾಜರುಪಡಿಸಲು ನನಗೆ ತೊಂದರೆ ಇರುವುದಿಲ್ಲ. ದಾವಾ ಆಸ್ತಿಯು ಹಾಗೂ ಕ್ರಯ ಪತ್ರದಲ್ಲಿ ತೋರಿಸುವ ಆಸ್ತಿಯು ಅಸ್ತಿತ್ವದಲ್ಲೇ ಇರುವುದಿಲ್ಲ ಎಂದರೆ ಸರಿಯಲ್ಲ.

1 ಮತ್ತು 2 ನೇ ಪ್ರತಿವಾದಿಯ ತಾಯಿಯ ಹೆಸರು ಅನಸೂಯಮ್ಮ ಎಂದರೆ ಸರಿ. ಸದರಿ ಅನಸೂಯಮ್ಮರವರು ಆಸ್ತಿ ಸಂಖ್ಯೆ 14 ಮತ್ತು15 ನ್ನು ರಾಘವೇಂದ್ರಗುಪ್ತರವರಿಂದ ಖರೀದಿಸಿದ್ದರು ಎಂದರೆ ಸರಿ. ಅನಸೂಯಮ್ಮರವರ ಕ್ರಯ ಪತ್ರದಲ್ಲಿ ಉತ್ತರ ಹಾಗೂ ಪಶ್ಚಿಮಕ್ಕೆ ರಸ್ತೆ ಎಂದು ನಮೂದಿಸಿದ್ದಾರೆ ಎಂದರೆ ಸರಿ. ರಾಘವೇಂದ್ರಗುಪ್ತರವರ ಆಸ್ತಿಯ ಪಶ್ಚಿಮಕ್ಕೆ ನನ್ನ ಆಸ್ತಿ ಇಲ್ಲದ ಕಾರಣ ಪಶ್ಚಿಮಕ್ಕೆ ರಸ್ತೆ ಎಂದು ತೋರಿಸಲಾಗಿದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನನ್ನ ಸೈಟಿನಿಂದ ಉದ್ದಕ್ಕೂ ಮನೆಗಳಿವೆ ಎಂದು ನುಡಿಯುತ್ತಾರೆ. ದಾವಾ ಆಸ್ತಿ ಹಾಗೂ ರಾಮಚಂದ್ರಪ್ಪರವರು ಬರೆದುಕೊಟ್ಟರು ಎಂದು ಹೇಳುವ ಆಸ್ತಿಯು ಅಸ್ತಿತ್ವದಲ್ಲಿಲ್ಲದಿರುವ ಕಾರಣ ಅದಕ್ಕೆ ಸಂಬಂಧಪಟ್ಟ ಮೂಲ ದಾಖಲೆಗಳನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯು ಅಸ್ತಿತ್ವದಲ್ಲಿಲ್ಲದ ಕಾರಣ ರಾಮಚಂದ್ರಪ್ಪರವರಿಗೆ ಆಸ್ತಿಯು ಹೇಗೆ ಬಂತು ಎಂಬ ವಿಚಾರವನ್ನು ನನ್ನ ವಾದ ಪತ್ರ

ಹಾಗೂ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಬರೆಸಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಚೆಕ್ಕು ಬಂದಿ ಹಾಗೂ ವಿಸ್ತೀರ್ಣವನ್ನು ಸಾಭೀತುಪಡಿಸಲು ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಇಲಾಖೆಯವರು ರೂ. 18,000/-ಗಳನ್ನು ಪಡೆದುಕೊಂಡು ಮನೆ ಕಟ್ಟಲು ಪರವಾನಿಗೆಯನ್ನು ನೀಡಿದ್ದಾರೆ ಎಂದು ನುಡಿಯುತ್ತಾರೆ. ನಾನು ಮುನಿಸಿಪಾಲಿಟಿಯವರೊಂದಿಗೆ ಶಾಮಿಲಾಗಿ ನಕಲಿ ಕ್ರಯ ಪತ್ರದ ಆಧಾರದ ಮೇಲೆ ದಾಖಲೆಗಳನ್ನು ಸೃಷ್ಠಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ದಾವಾ ಆಸ್ತಿಯು ಅಸ್ತಿತ್ವದಲ್ಲಿಲ್ಲದ ಕಾರಣ ನಾನು ದಾವಾ ಆಸ್ತಿಯ ಸ್ವಾಧೀನದಲ್ಲಿದ್ದೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವೆಯನ್ನು ಹೂಡಲು ವ್ಯಾಜ್ಯ ಕಾರಣ ಇಲ್ಲದಿದ್ದರೂ ಸಹ ಅದನ್ನು ಸೃಷ್ಠಿ ಮಾಡಿಕೊಂಡು ನ್ಯಾಯಾಲಯದ ಮುಂದೆ ಸುಳ್ಳು ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ. ನಾನು, ರಾಮಚಂದ್ರಪ್ಪ ಹಾಗೂ ನಿಪಿ-2 ಕ್ಕೆ ಸಹಿ ಮಾಡಿರುವ ಸಾಕ್ಷಿಗಳು ಎಲ್ಲರೂ ಸೇರಿ ಅಕ್ರಮ ಲಾಭ ಪಡೆಯುವ ಉದ್ದೇಶದಿಂದ ನಿಪಿ-2ರ ಕ್ರಯ ಪತ್ರವನ್ನು ಸೃಷ್ಠಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಾನು ಸತ್ಯಾಂಶಗಳನ್ನು ಮರೆಮಾಚಿ ಸುಳ್ಳು ದಾವೆಯನ್ನು ಹೂಡಿರುವ ಕಾರಣ ನ್ಯಾಯಾಲಯದಿಂದ ಪರಿಹಾರವನ್ನು ಪಡೆದುಕೊಳ್ಳಲು ಅನರ್ಹನಾಗಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ತೊಂದರೆ ನೀಡುವ ಉದ್ದೇಶದಿಂದ ಈ ಸುಳ್ಳು ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇರುವುದಿಲ್ಲ**.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ.ಸ. ಇದೆ

ಸಹಿ/-
ಪ್ರ.ಸಿ.ನ್ಯಾ ಮತ್ತು ಜೆಎಂಎಫ್‌ಸಿ,
ಗೌರಿಬಿದನೂರು